
# ಜ್ಞಾನಶಕ್ತಿ

ಮಾಸ ಪತ್ರಿಕೆ

JNANASHAKTHI


ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 13 Reg. No. : KARBIL / 2005 / 16123 ಜೂನ್ - 2024 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 6 ಪ್ರಕಟಣೆ : 25-06-2024


## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ಸಹಾಯಹಸ್ತ



ಶ್ರೀ ಬಿ. ಎಂ. ದಾಮೋದರ ರಾವ್ ಮತ್ತು ಡಾ। ರಾಧಮ್ಮ ರಾವ್ ಇವರ ಸ್ಮರಣಾರ್ಥ ಅವರ ಪುತ್ರಿ ಬೆಂಗಳೂರು ನಿವಾಸಿ ಶ್ರೀಮತಿ ಗೀತಾ ಸಿ. ರಾವ್ ಮತ್ತು ಅಳಿಯ ಶ್ರೀ ಚಿಂತಾಮಣಿ ಎ. ರಾವ್ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿನಿಲಯಕ್ಕೆ ರೂ. **5,00,100/-** (ರೂಪಾಯಿ ಐದು ಲಕ್ಷದ ನೂರು) ದೇಣಿಗೆ ನೀಡಿದ್ದಾರೆ. ಇನ್ನು ಮುಂದೆಯೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಈ ದಂಪತಿಗಳಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು.



ಶ್ರೀ ಕೃಷ್ಣ ರಾವ್ ಕರ್ವಾಲು ಮತ್ತು ಶ್ರೀಮತಿ ವನಜಾಕ್ಷಮ್ಮ ಸ್ಮರಣಾರ್ಥ ಅವರ ಪುತ್ರಿ, ಶ್ರೀ ಸುಬ್ರಹ್ಮಣ್ಯ ಸಭಾದ ಮಹಿಳಾ ವೇದಿಕೆಯ ಕಾರ್ಯದರ್ಶಿ ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ಹಾಗೂ ಅಳಿಯ ಶ್ರೀ ಇನ್ನ ಶ್ರೀನಿವಾಸ್ ರಾವ್‌ರವರು ತಮ್ಮ 45ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಸವಿನೆನಪಿಗಾಗಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿ ನಿಲಯಕ್ಕೆ ರೂ. 1,00,000/- (ರೂಪಾಯಿ ಒಂದು ಲಕ್ಷ) ದೇಣಿಗೆ ನೀಡಿದ್ದಾರೆ. ಈ ಹಿಂದೆಯೂ ಅವರು ರೂ. 1,25,000/- ನೀಡಿದ್ದು, ಒಟ್ಟು ರೂ. 2,25,000/- ನೀಡಿದಂತಾಗಿದೆ. ಇನ್ನು ಮುಂದೆಯೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀ ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಶ್ರೀಮತಿ ಸುಜಾತಾ ಬೆಳ್ಳೆ, ನಿರ್ದೇಶಕ ಶ್ರೀ ಸಂತೋಷ್ ಯು., ಶ್ರೀ ಸಾಯಿಪ್ರಸಾದ್, ಶ್ರೀ ರಾಘವೇಂದ್ರ ರಾವ್ ಇವರು ಉಪಸ್ಥಿತರಿದ್ದರು.

(ಛಾಯಾಚಿತ್ರ : ಶ್ರೀ ರಘುವೀರ್ ಪೆರ್ಡೂರ್)



ಎಲ್ಲೂರು ಶ್ರೀ ರಾಮಕೃಷ್ಣಯ್ಯ ಮತ್ತು ಶ್ರೀಮತಿ ನಾಗವೇಣಿಯವರ ಸ್ಮರಣಾರ್ಥ ಅವರ ಪುತ್ರ ಬೆಂಗಳೂರಿನ ನಿವಾಸಿ ಶ್ರೀ ವೈ. ಚಂದ್ರಶೇಖರ್ ರಾವ್ ಮತ್ತು ಸೊಸೆ ಶ್ರೀಮತಿ ಶೋಭಾ ಚಂದ್ರಶೇಖರ್ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿನಿಲಯಕ್ಕೆ ರೂ. **1,00,000/-** (ರೂಪಾಯಿ ಒಂದು ಲಕ್ಷ) ದೇಣಿಗೆ ನೀಡಿದ್ದಾರೆ. ಇನ್ನು ಮುಂದೆಯೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀಮತಿ ವಿದ್ಯಾ ವಿಜಯ ಕುಮಾರ್ ರಾವ್, ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ನಿರ್ದೇಶಕರುಗಳಾದ ಶ್ರೀ ಕೆ. ಪ್ರಭಾಕರ್ ರಾವ್, ಶ್ರೀಮತಿ ವೈಜಯಂತಿ ಬೆಳ್ಳೆ, ಶ್ರೀಮತಿ ಸ್ನೇಹಲತಾ ದಿವಾಕರ್ ಇವರು ಉಪಸ್ಥಿತರಿದ್ದರು.

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)

ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು

ಸಮಾಜ ಬಾಂಧವರೇ,

**ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ**

ತಾ. **21-07-2024**ನೇ ಆದಿತ್ಯವಾರದಂದು

## 'ಆಟಿತೊ ಆಟ ಕೂಟ'



ಎಂಬ ವಿಶಿಷ್ಟ ಕಾರ್ಯಕ್ರಮ ನಡೆಯಲಿದೆ. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿಸುತ್ತೇವೆ.

ಅಧ್ಯಕ್ಷರು ಮತ್ತು ಸರ್ವ ಸದಸ್ಯರು
ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು



### ಕಾರ್ಯಕ್ರಮಗಳು

| | |
|---|---|
| ಬೆಳಗ್ಗೆ 8-30ರಿಂದ : | ಉಪಾಹಾರ |
| ಬೆಳಗ್ಗೆ 9-00ರಿಂದ : | ಕಲ್ಲಾಟ (ಪೊಕ್ಕು), ಕೇರಂ ಪಂದ್ಯಾಟ, ಚೆಸ್ ಪಂದ್ಯಾಟ ಚೆನ್ನೆಮಣೆ ಪಂದ್ಯಾಟ ಆರಂಭ (ಮುಕ್ತ ವಿಭಾಗ) |
| ಮಧ್ಯಾಹ್ನ 1-00ರಿಂದ : | ಆಟಿಯ ವಿಶೇಷ ಖಾದ್ಯಗಳನ್ನೊಳಗೊಂಡ ಭೋಜನ |
| ಮಧ್ಯಾಹ್ನ 2-00ರಿಂದ : | ವಿಶೇಷ ಕಾರ್ಯಕ್ರಮ |
| ಮಧ್ಯಾಹ್ನ 2-30ರಿಂದ : | ತುಳುನಾಡಿನ ಹಳ್ಳಿ ಉಡುಗೆ ಸ್ಪರ್ಧೆ (ಮುಕ್ತ ವಿಭಾಗ) |
| ಮಧ್ಯಾಹ್ನ 3-00ರಿಂದ : | 'ಕರೋಕೆ' ರಸಮಂಜರಿ – ಸಮಾಜದ ಪ್ರತಿಭೆಗಳಿಂದ (ಟ್ರಾಕ್‌ಗಳಿಗೆ ಮಾತ್ರ ಅವಕಾಶ) |
| ಸಂಜೆ 4-30ರಿಂದ : | ಬಹುಮಾನ ವಿತರಣೆ, ರಾಷ್ಟ್ರಗೀತೆ |



ಬಹುಮಾನದ ಪ್ರಾಯೋಜಕರು : **ಶ್ರೀಮತಿ ಸ್ನೇಹಲತಾ ದಿವಾಕರ್ ರಾವ್**

**ವಿಶೇಷ ಸೂಚನೆ :**
ಪಂದ್ಯಾಟದಲ್ಲಿ ಹಾಗೂ 'ಕರೋಕೆ' ರಸಮಂಜರಿಯಲ್ಲಿ ಭಾಗವಹಿಸುವವರು ದಯವಿಟ್ಟು ಮುಂಚಿತವಾಗಿ ತಮ್ಮ ಹೆಸರನ್ನು ನೋಂದಾಯಿಸಬೇಕಾಗಿ ವಿನಂತಿ.

**ಹೆಚ್ಚಿನ ಮಾಹಿತಿಗಾಗಿ :**

| | |
|---|---|
| ಶ್ರೀ ಅನಿಲ್ ಎನ್. | 9448815172 |
| ಶ್ರೀ ಸುರೇಶ್ ಕಡಬ | 9972760673 |
| ಶ್ರೀಮತಿ ಕುಸುಮಾ ನವೀನ್ ಕುಮಾರ್ | 9480760904 |
| ಶ್ರೀಮತಿ ಪುಷ್ಪಾ ಶ್ರೀನಿವಾಸ್ | 9739155359 |

## ಜ್ಞಾನಶಕ್ತಿ ಮಾಸಪತ್ರಿಕೆ

ಪ್ರಧಾನ ಸಂಪಾದಕರು : ಎಂ. ಎಸ್. ರಘುನಾಥ ರಾವ್ ಪುತ್ತೂರು - 9448481696
ಸಂಪಾದಕರು : ಪಿ. ಶ್ರೀಕಾಂತ್ ರಾವ್ 9343361618
ಸಂಪಾದಕ ಮಂಡಳಿ : • ನಾಗರಾಜ್ ವರ್ಕಾಡಿ • ರಘುವೀರ್ ಪೆರ್ಡೂರು
• ಟಿ. ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ
ಆರ್ಥಿಕ ಸಲಹಾ ಸಮಿತಿ : • ಕರುಣ್ ರಾವ್ ಬೆಳ್ಳೆ • ಅನಿಲ್ ರಾವ್ ಬಿ. ಎಸ್.
ಗೌರವ ಸಲಹೆಗಾರರು : • ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್
ಪ್ರಕಾಶಕರು : ಹರ್ಷಕುಮಾರ್ ಕೇದಿಗೆ
: 7795116598 ✆ : 9343361618 e-mail : jnanashakthisss@gmail.com

## ‘ಕಂಪ್ಯೂಟರ್ ಶಿಕ್ಷಣ ವಿದ್ಯಾನಿಧಿ’



ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್‌ರವರು ಕಂಪ್ಯೂಟರ್ ಶಿಕ್ಷಣ ಕಲಿಯುವ ಮಕ್ಕಳಿಗೆ ಸಹಾಯ ಮಾಡಲು ಶ್ರೀ ಸುಬ್ರಹ್ಮಣ್ಯ ಸಭಾ ಚಾರಿಟೇಬಲ್ ಟ್ರಸ್ಟ್ ಮುಖಾಂತರ ಮೂಲನಿಧಿಯಾಗಿ ರೂ. 1,10,000/– (ಒಂದು ಲಕ್ಷದ ಹತ್ತು ಸಾವಿರ) ದೇಣಿಗೆ ನೀಡಿ **‘ಕಂಪ್ಯೂಟರ್ ಶಿಕ್ಷಣ ವಿದ್ಯಾನಿಧಿ’**ಯನ್ನು ಸ್ಥಾಪಿಸಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಕೃತಜ್ಞತೆಗಳು. ಪ್ರಪಂಚದ ವಿವಿಧ ಕ್ಷೇತ್ರದಲ್ಲಿ ಇಂದು ಕಂಪ್ಯೂಟರ್ ಅನಿವಾರ್ಯವಾಗಿರುವುದರಿಂದ ಎಲ್ಲಾ ಮಕ್ಕಳು ಸಣ್ಣ ವಯಸ್ಸಿನಲ್ಲಿ ಕಂಪ್ಯೂಟರ್ ಮೂಲಕ ಶಿಕ್ಷಣ ಪಡೆಯುವ ಅಗತ್ಯವಿದೆ. ಮುಂದಿನ ದಿನಗಳಲ್ಲಿ ಈ ನಿಧಿಯ ಮೊತ್ತವನ್ನು ಕನಿಷ್ಠ ರೂ. 10 ಲಕ್ಷಕ್ಕೆ (ಹತ್ತು ಲಕ್ಷ) ಹೆಚ್ಚಿಸುವ ಉದ್ದೇಶವಿದೆ. ಇಂತಹ ಸಮಾಜಮುಖೀ ಕಾರ್ಯಕ್ಕೆ ದಾನಿಗಳ ಸಹಾಯಹಸ್ತವನ್ನು ನಿರೀಕ್ಷಿಸಲಾಗಿದೆ.

ದೇಣಿಗೆ ನೀಡುವ ಮೂಲಕ ಈ ನಿಧಿಯ ಮೊತ್ತವನ್ನು ಹೆಚ್ಚಿಸಿದ್ದಲ್ಲಿ ಬಹಳಷ್ಟು ಬಡಮಕ್ಕಳಿಗೆ ಸಹಾಯ ನೀಡಿದಂತಾಗುತ್ತದೆ. ದಯವಿಟ್ಟು ಹೆಚ್ಚಿನ ಸಂಖ್ಯೆಯಲ್ಲಿ ಈ ನಿಧಿಗೆ ದೇಣಿಗೆ ನೀಡಿ ಸಹಾಯ ಮಾಡಬೇಕೆಂದು ಶ್ರೀ ಸುಬ್ರಹ್ಮಣ್ಯ ಸಭಾದ ಮನವಿ.

## ಭೋಜನ ಕುಟೀರ ಉದ್ಘಾಟನೆ



ಮಾರ್ಪಳ್ಳಿ ನಾಗಪ್ಪಯ್ಯ ವಂಶಜರ ಧಾರ್ಮಿಕ ಸಮಿತಿಯ ವತಿಯಿಂದ ಸುಮಾರು ನೂರಕ್ಕೂ ಹೆಚ್ಚು ವರ್ಷಗಳಿಂದ ಪೂಜಿಸಿಕೊಂಡು ಬರುತ್ತಿದ್ದ ದೈವಸ್ಥಾನದ ಜೀರ್ಣೋದ್ಧಾರವು 2021-22ರಲ್ಲಿ ನಡೆದಿದ್ದು, 2023ರಲ್ಲಿ ನಾಗಬ್ರಹ್ಮಸ್ಥಾನದ ಸ್ಥಳಾಂತರವನ್ನು ವಿಧ್ಯುಕ್ತವಾಗಿ ನೆರವೇರಿಸಲಾಯಿತು. ಅದರ ನಂತರ ಧಾರ್ಮಿಕ ಸಮಿತಿಯು ಕಾಲಕಾಲಕ್ಕೆ ತಕ್ಕ ನಾಗದೈವಗಳ ಪೂಜೆಯನ್ನು ನಡೆಸಿಕೊಂಡು ಬರುತ್ತಿದೆ. ಈ ಸಂದರ್ಭದಲ್ಲಿ ಕುಟುಂಬಸ್ಥರಿಗಾಗುವ ತೊಂದರೆಗಳನ್ನು ಗಮನಿಸಿ ಶಿವಮೊಗ್ಗ, ಬೆಂಗಳೂರಿನಲ್ಲಿ ವಾಸವಾಗಿರುವ ಮಾರ್ಪಳ್ಳಿ ಸರಸ್ವತಿ ರಾಮರಾಯರ ಮಕ್ಕಳು ಮತ್ತು ಮೊಮ್ಮಕ್ಕಳು ಸೇರಿ ಸುಮಾರು ಹದಿನೈದು ಲಕ್ಷ ವೆಚ್ಚದಲ್ಲಿ ಭೋಜನ ಕುಟೀರವನ್ನು ಕಟ್ಟಿಸಿದ್ದು, ಅದರ ಉದ್ಘಾಟನೆಯನ್ನು ಸರಸ್ವತಿ ರಾಮರಾಯರ ಕುಟುಂಬದ ಹಿರಿಯರಾದ ಶ್ರೀ ಗೋಪಾಲಕೃಷ್ಣ – ಜಯಲಕ್ಷ್ಮೀಯವರು ನೆರವೇರಿಸಿದರು. ವಾಸ್ತುಹೋಮ ಮೊದಲಾದುವುಗಳನ್ನು ವೇ। ಮೂ। ಬ್ರಹ್ಮಶ್ರೀ ಗುರುಪ್ರಸಾದ್ ಹೆಬ್ಬಾರರ ತಂಡದ ನೇತೃತ್ವದಲ್ಲಿ ನಡೆಸಲಾಯಿತು. ಈ ಭೋಜನ ಕುಟೀರಕ್ಕೆ ಬೇಕಾದ ಭೂಮಿಯನ್ನು ಉಜಿರೆ ಶ್ರೀ ಸಚ್ಚಿದಾನಂದ ರಾಯರು ಮತ್ತವರ ಸಹೋದರ–ಸಹೋದರಿಯರು ಮತ್ತವರ ಮಕ್ಕಳು ಸೇರಿ ಉಚಿತವಾಗಿ ದಾನ ಕೊಟ್ಟುದದನ್ನು ಧಾರ್ಮಿಕ ಸಮಿತಿಯು ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತದೆ. ಈ ಭೋಜನ ಕುಟೀರವು ನಾಗಪ್ಪಯ್ಯ ವಂಶಜರ ಕುಟುಂಬಸ್ಥರ ಎಲ್ಲ ಧಾರ್ಮಿಕ ಕಾರ್ಯಕ್ರಮಗಳಿಗೆ ಉಚಿತವಾಗಿ ದೊರಕಲಿದೆ ಎಂದು ಟ್ರಸ್ಟಿಗಳಾದ ಶ್ರೀ ರವಿಪ್ರಕಾಶ ಮತ್ತು ಚಿಟ್ಪಾಡಿ ಶ್ರೀ ಸಂತೋಷ ರಾಯರು ತಿಳಿಸಿದರು. ಇದೇ ಸಂದರ್ಭದಲ್ಲಿ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ಇವರನ್ನು ಸನ್ಮಾನಿಸಲಾಯಿತು. ಹಾಗೆಯೇ ವೇ। ಮೂ। ಬ್ರಹ್ಮಶ್ರೀ ಗುರುಪ್ರಸಾದ್ ಹೆಬ್ಬಾರರು ಪುರೋಹಿತ ಸಂಘಟನೆಯ ಮಾಜಿ ಅಧ್ಯಕ್ಷರನ್ನೂ ಸನ್ಮಾನಿಸಲಾಯಿತು. ಸನ್ಮಾನ ಕಾರ್ಯಕ್ರಮವನ್ನು ಶ್ರೀ ಎಂ. ಆರ್. ವಾಸುದೇವ, ಶ್ರೀ ಆರ್. ಸದಾಶಿವ, ಶ್ರೀ ಎಂ.ಆರ್. ಚಂದ್ರಶೇಖರ, ಶಿರ್ತಾಡಿ ಶ್ರೀ ಸೂರ್ಯನಾರಾಯಣ, ಪುತ್ತೂರಿನ ಶ್ರೀ ಶಾಂತಾರಾಮ ರಾವ್ ಹಾಗೂ ಉಡುಪಿಯ ಶ್ರೀ ಸದಾನಂದ ರಾಯರು ನೆರವೇರಿಸಿದರು. ಶಿರ್ತಾಡಿ ಶ್ರೀ ಯೋಗೀಶ್ ಇವರು ಬಂದ ಸರ್ವರನ್ನೂ ಹಾರ್ದಿಕವಾಗಿ ವಂದಿಸಿದರು. ಕುಟೀರದ ನಿರ್ಮಾಣವನ್ನು ಸಕಾಲದಲ್ಲಿ ಮಾಡಿಕೊಟ್ಟ ಶ್ರೀ ಪ್ರಫುಲ್ಲ ಮತ್ತು ಶ್ರೀಮತಿ ಪೂರ್ಣಿಮಾ ಅವರ ಪುತ್ರ ಶ್ರೀ ಪ್ರತೀಕ ಇವರನ್ನೂ ಸನ್ಮಾನಿಸಲಾಯಿತು.

**ಶ್ರೀ ಎಂ. ಆರ್. ವಾಸುದೇವ, ಅಧ್ಯಕ್ಷರು ಮತ್ತು ಸರ್ವ ಸದಸ್ಯರು**
ಮಾರ್ಪಳ್ಳಿ ನಾಗಪ್ಪಯ್ಯ ವಂಶಜರ ಧಾರ್ಮಿಕ ಸೇವಾ ಸಮಿತಿ, ಮಾರ್ಪಳ್ಳಿ

## ಪ್ರಕಟಣೆ

**1**

2024–2025ನೇ ಸಾಲಿನಲ್ಲಿ ಪಿಯುಸಿ ಮತ್ತು ಮೇಲ್ಪಟ್ಟ ತರಗತಿಯಲ್ಲಿ ಕಲಿಯುವ ಸಮಾಜದ ಆರ್ಥಿಕವಾಗಿ ಹಿಂದಿರುವ ಕುಟುಂಬಗಳಿಂದ ಬರುವ ಅರ್ಹ ವಿದ್ಯಾರ್ಥಿಗಳಿಂದ ಸಾಮಾನ್ಯ ವಿದ್ಯಾರ್ಥಿವೇತನವನ್ನು ಪಡೆಯಲು ದಿನಾಂಕ 31–10–2024ರ ಒಳಗೆ ತಲುಪುವಂತೆ ಅರ್ಜಿಯನ್ನು **ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು** ಇವರಿಗೆ ಕಳುಹಿಸಿಕೊಡಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿ ಹಾಗೂ ಈ ವರ್ಷದ ಕಲಿಕಾ ಪ್ರಮಾಣಪತ್ರವನ್ನು ಲಗ್ತೀಕರಿಸಬೇಕು.

**ಅರ್ಜಿ ಫಾರ್ಮುಗಳು ದೊರೆಯುವ ವಿಳಾಸಗಳು ಈ ಕೆಳಗಿನಂತಿವೆ.**

- ❖ ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ, ಮಂಗಳೂರು, ಪದವಿನಂಗಡಿ, ಕಿನ್ನಿಗೋಳಿ, ಕುತ್ತಾರ್, ಪುತ್ತೂರು, ಬೆಳ್ತಂಗಡಿ, ಸುರತ್ಕಲ್, ಸುಳ್ಯ, ಬಿ. ಸಿ. ರೋಡ್, ಕಾರ್ಕಳ, ಮೂಡಬಿದ್ರೆ ಹಾಗೂ ವಿಟ್ಲ ಶಾಖೆಗಳು
- ❖ ಶ್ರೀ ಕೆ. ಹರ್ಷಕುಮಾರ್, ಪ್ರಮೋದ್ ಅಟೋಮೊಬೈಲ್, ಕರಂಗಲ್ಪಾಡಿ, ಮಂಗಳೂರು
- ❖ ಶ್ರೀ ಬಿ. ಎಸ್. ಅನಿಲ್ ರಾವ್, ವಿಶ್ರಮ್ ಮೋಟಾರ್ಸ್, ಕೊಡಿಯಾಲ್‌ಬೈಲ್, ಮಂಗಳೂರು
- ❖ ಶ್ರೀ ಉಮೇಶ್ ಶಾನ್‌ಭಾಗ್, ಮೂಕಾಂಬಿಕಾ ಟಿಂಬರ್ಸ್, ಕಿರಿಮಂಜೇಶ್ವರ, ಕುಂದಾಪುರ
- ❖ ಶ್ರೀ ಶಾರದಾಮಂಟಪ, ಕುಂಜಿಬೆಟ್ಟು, ಉಡುಪಿ
- ❖ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ, ಪಾವಂಜೆ
- ❖ ಶ್ರೀ ಶಾಲಿಪುರ ಸುಬ್ರಹ್ಮಣ್ಯ ದೇವಸ್ಥಾನ, ಕೊಕ್ರಾಡಿ, ಬೆಳ್ತಂಗಡಿ ತಾಲೂಕು
- ❖ ಶ್ರೀ ಎಂ. ಎಸ್. ಅರುಣ್ ಕುಮಾರ್, ದಿಶಾ ಬೇಕರಿ, ಉಜಿರೆ
- ❖ ಶ್ರೀ ದೇವಾನಂದ ಭಟ್, ಅಧ್ಯಕ್ಷರು, ಆದಿಶಂಕರ ಬ್ರಾಹ್ಮಣ ಸಭಾ, ಮೂಡಬಿದ್ರೆ
- ❖ ಶ್ರೀ ಕೇಶವ ರಾವ್, ಅಧ್ಯಕ್ಷರು, ಶಂಕರ ಪ್ರತಿಷ್ಠಾನ, ಕಾರ್ಕಳ, ಚತುರ್ಮುಖ ಬಸದಿ ಹತ್ತಿರ, ಕಾರ್ಕಳ
- ❖ ಶ್ರೀ ಹರಿಶ್ಚಂದ್ರ ರಾವ್, ಕಾರ್ಯದರ್ಶಿ, ಶಂಕರ ಪ್ರತಿಷ್ಠಾನ, ಕಾರ್ಕಳ
- ❖ ಶ್ರೀ ಎಂ. ಕೆ. ಮೋಹನ್ ರಾವ್, ಅಧ್ಯಕ್ಷರು, ಸ್ಥಾನಿಕ ಬ್ರಾಹ್ಮಣ ಸಂಘ, ಪಡುಬಿದ್ರೆ
- ❖ ಶ್ರೀ ಎನ್. ಕೆ. ಜಗನ್ನಿವಾಸ ರಾವ್, ವಕೀಲರು, ಪುತ್ತೂರು
- ❖ ಶ್ರೀ ಎಂ. ಎಸ್. ರಘುನಾಥ ರಾವ್, ರಾಜೇಶ್ ಪವರ್ ಪ್ರೆಸ್, ದರ್ಬೆ, ಪುತ್ತೂರು
- ❖ ಶ್ರೀ ಎನ್. ಎಸ್. ನಟರಾಜ್, ಪುತ್ತೂರು
- ❖ ಡಾ. ಸದಾಶಿವ ರಾವ್, ಜ್ಯೋತಿ ಆಸ್ಪತ್ರೆ, ಸುಳ್ಯ
- ❖ ಶ್ರೀ ಬಿ. ಭಾಸ್ಕರ್ ರಾವ್, ಬಾಯಂಬು, ಸುಳ್ಯ
- ❖ ಶ್ರೀ ತ್ರಿಶೂಲಿನಿ ದುರ್ಗಾಪರಮೇಶ್ವರೀ ದೇವಸ್ಥಾನ, ಬಳ್ಪ, ಸುಳ್ಯ ತಾಲೂಕು

ತಾ. 21–07–2024 **ಶ್ರೀ ಕರುಣ್ ರಾವ್ ಬೆಳ್ಳೆ,** ಕಾರ್ಯದರ್ಶಿ

**2**

2024–2025ನೇ ಸಾಲಿನಲ್ಲಿ ಶ್ರೀ ಸಭೆಯು ಸಮಾಜದ ಆರ್ಥಿಕವಾಗಿ ಹಿಂದಿರುವ ಕುಟುಂಬಗಳಿಂದ ಬರುವ ಅರ್ಹ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣವನ್ನು (ಬಿ.ಇ., ಎಂ.ಇ., ಎಂ.ಬಿ.ಬಿ.ಎಸ್., ಬಿ.ಡಿ.ಎಸ್., ಪಾಲಿಟೆಕ್ನಿಕ್, ಐ.ಟಿ.ಐ., ಎಂ.ಎ., ಎಂ.ಎಸ್.ಸಿ., ಎಂ.ಕಾಂ., ಸಿ.ಎ., ಬಿ.ಎಡ್., ಡಿ.ಎಡ್.) ಪಡೆಯಲು ಸಾಲ ವಿದ್ಯಾರ್ಥಿವೇತನವನ್ನು ವಿತರಿಸಲಿದೆ. ಈ ಸೌಲಭ್ಯವನ್ನು ಪಡೆಯಲು ಸಮಾಜದ ಅರ್ಹವಿದ್ಯಾರ್ಥಿಗಳು ಬಿಳಿ ಹಾಳೆಯಲ್ಲಿ **ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು** ಇವರಿಗೆ ಅರ್ಜಿಯನ್ನು ಬರೆಯಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿ ಹಾಗೂ ಈ ವರ್ಷದ ಕಲಿಕಾ ಪ್ರಮಾಣಪತ್ರವನ್ನು ಲಗ್ತೀಕರಿಸಬೇಕು.

ಈ ಹಿಂದೆ ಸಾಲ ವಿದ್ಯಾರ್ಥಿವೇತನವನ್ನು ಪಡೆದುಕೊಂಡ ವಿದ್ಯಾರ್ಥಿಗಳು ಶಿಕ್ಷಣವನ್ನು ಮುಂದುವರಿಸಲು 2024–2025ನೇ ಸಾಲಿನ ಕಂತನ್ನು ಪಡೆಯಲು ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ, ಮಂಗಳೂರು ಇವರನ್ನು ಸಂಪರ್ಕಿಸಲು ಕೋರಲಾಗಿದೆ.

ತಾ. 21–07–2024 **ಶ್ರೀ ಕರುಣ್ ರಾವ್ ಬೆಳ್ಳೆ,** ಕಾರ್ಯದರ್ಶಿ

**3**


ಶ್ರೀ ಕೂಡ್ಲು ವಿಷ್ಣು ಶಾನ್‌ಭಾಗರು ತಮ್ಮ ಪತ್ನಿ ಶ್ರೀಮತಿ ಕೂಡ್ಲು ಪ್ರೇಮಾವತಿ ಅಮ್ಮ ಸ್ಮಾರಕ ನಿಧಿಯನ್ನು ರೂ. 1,05,000/– ವಂತಿಗೆಯೊಂದಿಗೆ ಸ್ಥಾಪಿಸಿ ವೈದ್ಯಕೀಯ ಶಿಕ್ಷಣ ಪಡೆಯುವ ನಮ್ಮ ಸಮಾಜದ ಓರ್ವ ವಿದ್ಯಾರ್ಥಿಗೆ ಪ್ರೋತ್ಸಾಹಧನವನ್ನು ಕೊಡಲು ಬಯಸಿದ್ದಾರೆ. ಅಂತೆಯೇ ಅವರು ತಮ್ಮ ಪುತ್ರ ಕೂಡ್ಲು ಕೇಶವ ಶಾನುಭಾಗರ ಸ್ಮಾರಕ ನಿಧಿಯನ್ನು ರೂ. 1,00,000/– ವಂತಿಗೆಯೊಂದಿಗೆ ಸ್ಥಾಪಿಸಿ CA ಕಲಿಯುವ ಸಮಾಜದ ಓರ್ವ ವಿದ್ಯಾರ್ಥಿಗೆ ಪ್ರೋತ್ಸಾಹಧನವನ್ನು ಕೊಡಲು ಬಯಸಿದ್ದಾರೆ.

2024–2025ನೇ ಸಾಲಿನ ಮೇಲಿನ ಎರಡು ನಿಧಿಗಳ ಪಾರಿತೋಷಕವನ್ನು ಶ್ರೀ ಸಭೆಯಲ್ಲಿ ಸ್ಕಾಲರ್ಸ್ ಡೇ ಸಂದರ್ಭದಲ್ಲಿ ವಿತರಿಸಲಾಗುವುದು. ಆದುದರಿಂದ ಸಮಾಜದ ಅರ್ಹ ವಿದ್ಯಾರ್ಥಿಗಳು ಮೇಲಿನ ಪ್ರೋತ್ಸಾಹಧನಕ್ಕೆ ಅರ್ಜಿಯನ್ನು ಬರೆದು ದಿನಾಂಕ 31–10–2024ರ ಒಳಗೆ ತಲುಪುವಂತೆ **ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು** ಇವರಿಗೆ ಕಳುಹಿಸಿಕೊಡಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿಯನ್ನು ಲಗ್ತೀಕರಿಸಬೇಕು.

ತಾ. 21–07–2024 **ಶ್ರೀ ಕರುಣ್ ರಾವ್ ಬೆಳ್ಳೆ,** ಕಾರ್ಯದರ್ಶಿ

ಪತ್ರಿಕೆಗೆ ಶುಭ ಬಯಸುವ –
**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**
**ಶ್ರೀ ಗಣೇಶ ಕೃಪಾ, ಪೃಥ್ವೀ ಲೇಔಟ್, ಕೂಳೂರು, ಮಂಗಳೂರು - 575 013**

# ಪುತ್ತೂರು 'ಶಿವಸದನ'ದಲ್ಲಿ ಮಕ್ಕಳ ಗೆಜ್ಜೆಯ ಶಬ್ದದ ಸಂಭ್ರಮ



ಕದ್ರಿ ನೃತ್ಯ ವಿದ್ಯಾಲಯ ಚಾರಿಟೇಬಲ್ ಟ್ರಸ್ಟ್ ಇದರ ನಿರ್ದೇಶಕರಾದ 'ಗುರುಕುಲಭೂಷಣ' 'ನಾಟ್ಯವಿಶಾರದ' ದಕ್ಷಿಣ ಕನ್ನಡ ಜಿಲ್ಲಾ ಪ್ರಶಸ್ತಿ ವಿಜೇತ ವಿದ್ವಾನ್ ಯು. ಕೆ. ಪ್ರವೀಣ್ ತಮ್ಮ ತಂದೆ ಹಾಗೂ ಈ ಸಂಸ್ಥೆಯ ಸಂಸ್ಥಾಪಕರಾದ 'ಶಾಂತಲಾ' ಪ್ರಶಸ್ತಿ ವಿಜೇತ ಭರತನಾಟ್ಯ ಭೀಷ್ಮ, ಕೀರ್ತಿಶೇಷ ಶ್ರೀ ಯು. ಎಸ್. ಕೃಷ್ಣ ರಾವ್ ಅವರ 110ನೇ ಜನ್ಮದಿನಾಚರಣೆಯನ್ನು ಹಿರಿಯರಿರುವ ಕಡೆ ಬಂದು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು, ನಾಟ್ಯಗುರು ಯು. ಕೆ. ಪ್ರವೀಣ್ ಹಾಗೂ ಉಷಾ ಪ್ರವೀಣ್ ತನ್ನ ನೃತ್ಯಶಾಲೆಯ ಮಕ್ಕಳೊಂದಿಗೆ ಶಿವಸದನಕ್ಕೆ ಆಗಮಿಸಿ, 'ಗಣೇಶ ಜನನ' ಎಂಬ ನೃತ್ಯರೂಪಕವನ್ನು ಪ್ರದರ್ಶಿಸಿದರು.

ಇಲ್ಲಿನ ಹಿರಿಯರೊಂದಿಗೆ ಹುಟ್ಟುಹಬ್ಬ, ಮದುವೆಯ ವಾರ್ಷಿಕೋತ್ಸವ, ಪೂಜೆಗಳು, ಭಜನೆಗಳು ನಿರಂತರವಾಗಿ ನಡೆಯುತ್ತಿರುತ್ತದೆ. ಈಗ ಒಂದು ಹೊಸದಾಗಿ ಮಕ್ಕಳ ನೃತ್ಯ ರೂಪಕವನ್ನು ಪ್ರದರ್ಶಿಸುತ್ತಿರುವ ಹಾಗೂ ಭೂರಿ ಉಪಾಹಾರ ಸಮೇತ ಸಂಭ್ರಮದಿಂದ ಎಲ್ಲರನ್ನೂ ಒಂದುಗೂಡಿಸುವ ಪ್ರಯತ್ನ ಈ ಕುಟುಂಬದವರದ್ದು. ಶಿವಸದನದ ಪ್ರಗತಿಗೆ ರೂ. 50,000/– ದೇಣಿಗೆ ಸಹ ನೀಡಿ ಸಹಕರಿಸಿದ ಈ ಕುಟುಂಬ ಇನ್ನು ಮುಂದೆಯೂ ಆಗಾಗ ಇಂತಹ ಕಾರ್ಯಕ್ರಮಗಳನ್ನು ಇಲ್ಲಿನ ಹಿರಿಯರಿಗೋಸ್ಕರ ಪ್ರದರ್ಶಿಸುವ ಭರವಸೆ ನೀಡಿದ್ದಾರೆ. ದೇಶ–ವಿದೇಶಗಳಲ್ಲಿ ಪ್ರಖ್ಯಾತಿ ಪಡೆಯುತ್ತಿರುವ ಇವರ ಕಾರ್ಯಕ್ರಮ ನೋಡಲು ನಮಗೆ ಅಪರೂಪ ಆದರೆ ನಮ್ಮ ಶಿವಸದನದಲ್ಲಿ ನಡೆಯುತ್ತಿರುವುದು ನಮ್ಮೆಲ್ಲರ ಭಾಗ್ಯ.

ಇಂತಹ ಕಾರ್ಯಕ್ರಮವನ್ನು ಇಲ್ಲಿ ಪ್ರದರ್ಶಿಸಿದ ಯು. ಕೆ. ಪ್ರವೀಣ್ ದಂಪತಿಯವರಿಗೆ ನಮ್ಮ ಸುಬ್ರಹ್ಮಣ್ಯ ಸದನದ ಪರವಾಗಿ ಹಾಗೂ ಶಿವಸದನದ ಎಲ್ಲಾ ನಿವಾಸಿಗಳ ಪರವಾಗಿ ಅಭಿನಂದನೆಗಳು. ಸುಮಾರು ನೂರಕ್ಕೂ ಹೆಚ್ಚಿನ ನೃತ್ಯ ಪ್ರೇಮಿಗಳು, ಸುಮಾರು 2 ಗಂಟೆಯ ಈ ಸುಂದರ ರೂಪಕದ ಭಾವನಾಲೋಕದಲ್ಲಿ ತಲ್ಲೀನರಾದರು. ಇಲ್ಲಿನ ನಿವಾಸಿಯವರಂತೂ ತುಂಬಾ ಸಂತೋಷ ವ್ಯಕ್ತಪಡಿಸಿದ್ದು, ಅದುವೇ ಎಲ್ಲರಿಗೂ ಸಿಕ್ಕಿದ ಆಶೀರ್ವಾದ. ಇನ್ನು ಮುಂದೆಯೂ ಇಂತಹ ವೈವಿಧ್ಯತೆಯ ಕಾರ್ಯಕ್ರಮಗಳು ಇಲ್ಲಿ ನಡೆಯುತ್ತಿರಲಿ, ಹಿರಿಯರ ಮನಸ್ಸು ಆನಂದದಿಂದ ತುಂಬಲಿ. ಪ್ರತಿಯೊಬ್ಬರೂ ಇಲ್ಲಿ ಬಂದು ಅವರನ್ನು ಮಾತಾಡಿಸಿ ಅವರಲ್ಲಿ ಸ್ಫೂರ್ತಿ ತುಂಬುವಂತೆ ಎಲ್ಲರೂ ಪ್ರಯತ್ನಿಸುವ ಕೆಲಸ ನಿರಂತರವಾಗಿ ನಡೆಯುತ್ತಿರಲಿ. ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷ ಶ್ರೀ ಹರ್ಷಕುಮಾರ್ ಕೇದಿಗೆ, ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ನಿರ್ದೇಶಕ ಶ್ರೀ ಕೆ. ಪ್ರಭಾಕರ್ ರಾವ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಉಪನಯನ

ಶ್ರೀಮತಿ ರೇಷ್ಮಾ ಮತ್ತು ಶ್ರೀ ಶಿವಕುಮಾರ್ ಪಾಂಡೇಶ್ವರ್ ಇವರ ಪುತ್ರ **ಚಿ। ಅಭಿಜಿತ್**ನ ಬ್ರಹ್ಮೋಪದೇಶ ತಾರೀಕು 9–6–2024ನೇ ರವಿವಾರ ಬೆಂಗಳೂರಿನ ಕೊಡಿಗೆಹಳ್ಳಿ 'ಶ್ರೀ ಜ್ಞಾನಶಕ್ತಿ ಮಂಟಪ'ದಲ್ಲಿ ನಡೆಯಿತು.

ಪತ್ರಿಕೆಗೆ ಶುಭ ಬಯಸುವ–

**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

ಪತ್ರಿಕೆಗೆ ಶುಭ ಬಯಸುವ–

**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)

'ಶ್ರೀ ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್' ಬಿಜೈ ರಸ್ತೆ, ಮಂಗಳೂರು - 575 003
✆ : 9880968032 / 0824-2982095

**ಶಾಖೆಗಳು**

ಮಂಗಳೂರು: ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ
✆ : 0824 - 2491895 / 8861155454
ಪುತ್ತೂರು : ವಾಣಿಜ್ಯ ಸಂಕೀರ್ಣ ಒಂದನೇ ಮಹಡಿ, ತಾಲೂಕು ಕಚೇರಿ ರಸ್ತೆ
✆ : 08251 - 235895 / 8123659955
ಬೆಳ್ತಂಗಡಿ : 'ಬೃಂದಾವನ', ಸಂತೆಕಟ್ಟೆ (ಬಸ್‌ಸ್ಟಾಂಡ್ ಎದುರು)
✆ : 08256 - 234076 / 8867269944
ಸುರತ್ಕಲ್ : 'ಪೂವ ಆರ್ಕೇಡ್' ✆ : 0824 - 2477895 / 9611550803
ಕಾರ್ಕಳ : 'ಶ್ರೀ ಶಂಕರ', ಪ್ರಸಾದ್ ಭವನ ಕಂಪೌಂಡು
ಅನಂತಶಯನ ದೇವಸ್ಥಾನದ ಹತ್ತಿರ, ತೆಳ್ಳಾರ್ ರೋಡ್
✆ : 08258 - 235544 / 9980528800
ಸುಳ್ಯ : ಶ್ರೀ ಗಣೇಶ ವಾಣಿಜ್ಯ ಸಂಕೀರ್ಣ, ಹಳೇ ಬಸ್‌ಸ್ಟಾಂಡ್ ಎದುರು
✆ : 08257 - 233895 / 8147539955
ಬಿ.ಸಿ. ರೋಡ್ : ಲಕ್ಷ್ಮೀ ಮಹಲ್ ✆ : 08255 - 233895 / 8792464344
ವಿಟ್ಲ : ಅಪ್ಪಾಜಿ ರಾವ್ ಕಾಂಪ್ಲೆಕ್ಸ್, ಖಾಸಗಿ ಬಸ್‌ನಿಲ್ದಾಣದ ಬಳಿ
✆ : 08255 - 239895 / 8147469955
ಮೂಡಬಿದ್ರೆ : ವಾಸುದೇವ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಮೇಲುಗಡೆ
✆ : 08258 - 200161 / 8147549955
ಪದವಿನಂಗಡಿ: ಶ್ರೀ ವೆಂಕಟರಮಣ ದೇವಸ್ಥಾನದ ಹಿಂಭಾಗ
✆ : 9731405917
ಕುತ್ತಾರ್ : ಹಸನ್ ಎನ್‌ಕ್ಲೇವ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಬಳಿ
✆ : 8792034344
ಕಿನ್ನಿಗೋಳಿ : ಡೈಮಂಡ್ ಆರ್ಕೇಡ್ ಕಟ್ಟಡ, ಕಿನ್ನಿಗೋಳಿ ಬಸ್‌ಸ್ಟಾಂಡ್ ಹತ್ತಿರ
✆ : 8197677575

### ಆಕರ್ಷಕ ಪ್ರತಿಫಲದ ನಮ್ಮ ಠೇವಣಿ ಯೋಜನೆಗಳು


| ನಿರಖು ಠೇವಣಿ (F.D.) | | |
|---|---|---|
| 45 ದಿನಗಳಿಂದ 180 ದಿನಗಳ ವರೆಗೆ | - | 5% |
| 181 ದಿನಗಳಿಂದ 364 ದಿನಗಳ ವರೆಗೆ | - | 6% |
| 1 ವರ್ಷದಿಂದ 3 ವರ್ಷದ ವರೆಗೆ | - | 8% |
| 3 ವರ್ಷಕ್ಕಿಂತ ಮೇಲ್ಪಟ್ಟು | - | 9% |
| ಹಿರಿಯ ನಾಗರಿಕರಿಗೆ, ಸಂಘ–ಸಂಸ್ಥೆಗಳಿಗೆ 0.5% ಹೆಚ್ಚುವರಿ ಬಡ್ಡಿ | | |

| ಶ್ರೀ ಸುಬ್ರಹ್ಮಣ್ಯ ನಗದು ಪತ್ರ (CASH CERTIFICATE) ANNUALISED | | |
|---|---|---|
| ಆವರ್ತನ ಖಾತೆ (RECURRING DEPOSIT) | - | 8% |
| ಉಳಿತಾಯ ಖಾತೆ (SAVINGS BANK) | - | 3% |
| ಮಧುಸಂಚಯ ಖಾತೆ (PIGMY DEPOSIT) | - | 3% |

**ಹೂಡಿಕೆಗಳು ದ್ವಿಗುಣಗೊಳ್ಳುವ ವಿಶೇಷ ನಿರಖು ಠೇವಣಿ ಯೋಜನೆ**
ಕನಿಷ್ಠ ಠೇವಣಿ : ರೂ. **10,000/-** ಠೇವಣಿ ಅವಧಿ : **88** ತಿಂಗಳು
ವಿಶೇಷ ಬಡ್ಡಿದರ : **9.6%**



Prop. : SUDHAKAR BELLE
✆ : 9845193103/ 9481563103
**KARAN DIGITAL STUDIO**
Sadasukh Building, Nr. Postoffice, Padubidri - 574 111
Opp. Busstand Belman
All Marriage & Other functions Photography & Videography Available



# ರಾಮಾ ಅಟೋಮೊಬೈಲ್ಸ್

ಮಾರುತಿ ವಾಹನ ತಜ್ಞರು
ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

## ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ದೇಣಿಗೆ



ಮಂಗಳೂರು ಕದ್ರಿ ನೃತ್ಯ ವಿದ್ಯಾನಿಲಯ ಸ್ಥಾಪಕ ವಿದ್ವಾನ್ ಶ್ರೀ ಯು. ಎಸ್. ಕೃಷ್ಣ ರಾವ್ ಮತ್ತು ಶ್ರೀಮತಿ ಜಯಲಕ್ಷ್ಮೀ ರಾವ್ ಸ್ಮರಣಾರ್ಥ ಅವರ ಪುತ್ರ ವಿದ್ವಾನ್ ಶ್ರೀ ಯು. ಕೆ. ಪ್ರವೀಣ್ ಮತ್ತು ಸೊಸೆ ಶ್ರೀಮತಿ ಉಷಾ ಪ್ರವೀಣ್ ತಮ್ಮ ಮಕ್ಕಳಾದ ಶ್ರೀ ಶರಣ್, ಶ್ರೀ ಚಂದನ್, ಸೊಸೆ ಶ್ರೀಮತಿ ನಿಶ್ವಿತಾ ಶರಣ್, ಮೊಮ್ಮಕ್ಕಳಾದ ಆರುಹಿ, ಆರುಷ್ ಜತೆಗೂಡಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿನಿಲಯಕ್ಕೆ ರೂ. 50,000/– ದೇಣಿಗೆ ನೀಡಿದ್ದಾರೆ. ಇನ್ನು ಮುಂದೆಯೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀ ಸುಬ್ರಹ್ಮಣ್ಯ ಸಭಾದ ಜೊತೆ ಕಾರ್ಯದರ್ಶಿ ಶ್ರೀ ಅನಿಲ್ ರಾವ್ ಬಿ. ಎಸ್., ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್, ನಿರ್ದೇಶಕರಾದ ಶ್ರೀ ಉದಯ ಕುಮಾರ್ ಪಿ., ಶ್ರೀ ಸಂತೋಷ್ ಯು., ಶ್ರೀ ಅನಿಲ್ ನೆಲ್ಲಿಕುಂಜೆ, ಶ್ರೀಮತಿ ಪುಷ್ಪಾ ಶ್ರೀನಿವಾಸ್ ಇವರು ಉಪಸ್ಥಿತರಿದ್ದರು.

---

ಬೆಂಗಳೂರು ನಿವಾಸಿ ಶ್ರೀ ಸುದೀಪ್ ಪಿ. ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿನಿಲಯಕ್ಕೆ ರೂ. 50,000/– ದೇಣಿಗೆ ನೀಡಿ ಓರ್ವ ನಿವಾಸಿಯ ಒಂದು ವರ್ಷದ ಖರ್ಚನ್ನು ಪ್ರಾಯೋಜಿಸಿದ್ದಾರೆ. ಇನ್ನು ಮುಂದೆಯೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು.

## ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ವಾರ್ಷಿಕೋತ್ಸವ




ಪಡುಬಿದ್ರಿಯ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ವಾರ್ಷಿಕೋತ್ಸವವು ದಿನಾಂಕ 22–05–2024ನೇ ಬುಧವಾರ ಕ್ಷೇತ್ರದ ತಂತ್ರಿವರೇಣ್ಯರಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ನಡೆಯಿತು. ದೇವಳದ ಗರ್ಭಗುಡಿಯ ಹೊರಮೈ, ಬಾಗಿಲುಗಳು, ತೀರ್ಥಮಂಟಪ ಹಾಗೂ ಮುಖ್ಯದ್ವಾರಕ್ಕೆ ಸುಮಾರು ರೂ. 14 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾದ ಹಿತ್ತಾಳೆಯ ಕವಚದ ಕೆಲಸವನ್ನು ದೇವರಿಗೆ ಸಮರ್ಪಿಸಲಾಯಿತು. ಬೆಳಗ್ಗೆ ಹನ್ನೆರಡು ಕಾಯಿ ಗಣಹೋಮ, ದೇವರಿಗೆ ಕಲಶಾಭಿಷೇಕ, ಹೂವಿನ ಪೂಜೆ, ಮಹಾಪೂಜೆಯು ನಡೆಯಿತು. ಈ ಕಾರ್ಯಕ್ರಮದಲ್ಲಿ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರಿ ಇದರ ಮಹಿಳಾ ವೇದಿಕೆಯ ಸದಸ್ಯರು ಹಾಗೂ ಉಡುಪಿ ಶಾರದಾ ಮಂಟಪದ ಸದಸ್ಯೆಯರಿಂದ ಭಜನಾ ಕಾರ್ಯಕ್ರಮ ನಡೆಯಿತು. ಮಧ್ಯಾಹ್ನ ಅನ್ನಸಂತರ್ಪಣೆ ನಡೆಯಿತು. ರಾತ್ರಿ ಗಂಟೆ 7–00ಕ್ಕೆ ದೇವರಿಗೆ ರಂಗಪೂಜೆಯು ನಡೆಯಿತು.

## ಶ್ರೀ ಸುಬ್ರಹ್ಮಣ್ಯ ಸಭಾ ವಿದ್ಯಾನಿಧಿಗೆ ದೇಣಿಗೆ



ಕಾಂತಾವರ ಶ್ರೀ ಜಯಪ್ರಕಾಶ್ ರಾವ್ ಅವರ ಧರ್ಮಪತ್ನಿ ಶ್ರೀಮತಿ ಶ್ರೀಲತಾ ಜಯಪ್ರಕಾಶ್ ತಮ್ಮ ಪತಿ ಸ್ಥಾಪಿಸಿದ ವಿದ್ಯಾರ್ಥಿವೇತನ ನಿಧಿಗೆ ರೂ. 70,000/ವನ್ನು ಶ್ರೀ ಸುಬ್ರಹ್ಮಣ್ಯ ಸಭಾ ಚಾರಿಟೇಬಲ್ ಟ್ರಸ್ಟ್‌ಗೆ ನೀಡಿದ್ದು, ನಿಧಿಯನ್ನು ರೂ. 3.35 ಲಕ್ಷಕ್ಕೆ ಹೆಚ್ಚಿಸಿರುವರು. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಅವರ ಪುತ್ರ ಶ್ರೀ ಜಯದೀಪ್, ಮಗಳು ಶ್ರೀಮತಿ ಶೀತಲ್ ರಾವ್, ಮೊಮ್ಮಗಳು ಕು। ನಿವೇದ ಶ್ರೀ ಸಭಾ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್, ಕಾರ್ಯದರ್ಶಿ ಶ್ರೀಮತಿ ಪುಷ್ಪಾ ಶ್ರೀನಿವಾಸ್, ಶ್ರೀ ಶ್ರೀನಿವಾಸ್ ರಾವ್ ಉಪಸ್ಥಿತರಿದ್ದರು. ***(ಚಿತ್ರ : ಶ್ರೀ ರಘುವೀರ್ ಪೆರ್ಡೂರ್)***

---



ಡಾ। ಸಾಂತೂರ್ ದಿವಾಕರ್ ರಾವ್ ಮತ್ತು ಶ್ರೀಮತಿ ಸ್ನೇಹಲತಾ ದಿವಾಕರ್ ದಂಪತಿಗಳು ತಮ್ಮ ಹಿರಿಯರ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವಿದ್ಯಾನಿಧಿ ಸ್ಥಾಪಿಸಿದ್ದು, ಇಂದಿನ ತಮ್ಮ 62ನೇ ವಿವಾಹ ವಾರ್ಷಿಕೋತ್ಸವದ ಸವಿನೆನಪಿಗಾಗಿ ರೂ. 40,000/– ನೀಡಿ ಅದನ್ನು ರೂ. 3,70,000ಕ್ಕೆ ಹೆಚ್ಚಿಸಿದ್ದಾರೆ. ಅವರಿಗೆ ಶ್ರೀ ಸಭಾದ ಪರವಾಗಿ ಅನಂತಾನಂತ ವಂದನೆಗಳು.

---

ಹೆಜಮಾಡಿಯ ಶ್ರೀ ರೋಹಿತ್ ಕುಮಾರ್ ಯಚ್. ತನ್ನ ತಂದೆಯವರಾದ ಕೀರ್ತಿಶೇಷ ಶ್ರೀ ಹೆಜಮಾಡಿ ವೆಂಕಪ್ಪಯ್ಯ ಕೃಷ್ಣರಾವ್ ಇವರ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಸ್ಥಾಪಿಸಿದ ಸಾಲ ವಿದ್ಯಾರ್ಥಿವೇತನ ನಿಧಿಗೆ 2024–25ರ ಸಾಲಿನಲ್ಲಿ ರೂ. 50,000/– ದೇಣಿಗೆ ನೀಡಿರುತ್ತಾರೆ. ಈ ಮೊದಲು 2023–24ರ ಸಾಲಿನವರೆಗೆ ರೂ. 2,25,000/– ನೀಡಿದ್ದು, ಒಟ್ಟು ಮೊತ್ತ ರೂ. 2,75,000/– ಆಗಿರುತ್ತದೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ವಂದನೆಗಳು. ಶ್ರೀ ಸುಬ್ರಹ್ಮಣ್ಯ ಸಭಾದಿಂದ 2023–2024 ಅವಧಿಯಲ್ಲಿ 81 ವಿದ್ಯಾರ್ಥಿಗಳಿಗೆ ಒಟ್ಟು ರೂ. 1,11,44,000/– (ಒಂದು ಕೋಟಿ ಹನ್ನೊಂದು ಲಕ್ಷದ ನಲ್ವತ್ತನಾಲ್ಕು ಸಾವಿರ) ವಿದ್ಯಾರ್ಥಿವೇತನ ಮತ್ತು ಸಾಲ ವಿದ್ಯಾರ್ಥಿವೇತನ ನೀಡಲಾಗಿದೆ. ಇದನ್ನು ಪಡೆದ ಹಲವು ವಿಧ್ಯಾರ್ಥಿಗಳು, ಅವರ ಹೆತ್ತವರು, ಸಹೃದಯ ದಾನಿಗಳು ತಮ್ಮ ಹಿರಿಯರ ಸ್ಮರಣಾರ್ಥ ವಿದ್ಯಾರ್ಥಿನಿಧಿಗಳನ್ನು ಸ್ಥಾಪಿಸಿದ್ದಾರೆ. ನಾವು ಪ್ರತಿವರ್ಷ ನಿಗದಿತ ಮೊತ್ತವನ್ನು ಹೆಚ್ಚಿಸುತ್ತಿದ್ದು, ಇನ್ನಷ್ಟು ವಿದ್ಯಾನಿಧಿಗಳನ್ನು ದಾನಿಗಳು ಸ್ಥಾಪಿಸಲು ವಿನಂತಿಸುತ್ತೇವೆ. ಆದಾಯ ತೆರಿಗೆ ವಿನಾಯತಿ ಲಭ್ಯವಿರುತ್ತದೆ.

'ಶಿವಸದನ' ವಸತಿ ನಿಲಯವು ಸುಮಾರು ರೂ. 5 ಕೋಟಿಗಳ ಯೋಜನೆ ಆಗಿದ್ದು, ರೂ. 57,89,900/– ಸಾಲ ಬಾಕಿ ಇರುತ್ತದೆ. ದಾನಿಗಳ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ. ವಸ್ತುರೂಪದಲ್ಲೂ ದೇಣಿಗೆ ನೀಡಬಹುದು. ಹಿರಿಯ ನಾಗರಿಕರ ಸಸ್ಯಾಹಾರಿ ವಸತಿನಿಲಯದಲ್ಲಿ ಈಗಾಗಲೇ 40ಕ್ಕೂ ಹೆಚ್ಚು ನಿವಾಸಿಗಳಿದ್ದು, ಮಿತದರದಲ್ಲಿ ಸಸ್ಯಾಹಾರಿ ಊಟೋಪಚಾರ ಲಭ್ಯವಿರುತ್ತದೆ. ಅಪೇಕ್ಷಿತರಿಗೆ ಮಾಹಿತಿ ನೀಡಿ ಸಹಕರಿಸಿ.

***ಹೆಚ್ಚಿನ ಮಾಹಿತಿ : ಶ್ರೀ ಕರುಣ್ ರಾವ್ ಬೆಳ್ಳೆ ಮೊಬೈಲ್ : 7337634359***
***ಶ್ರೀ ಪಿ. ಶ್ರೀಕಾಂತ್ ರಾವ್ ಮೊಬೈಲ್ : 7795116598***

PREETHIKA AUTOMOBILES
2493633
9845851573
*Wholesale & Retail Dealers in :*
*2 & 3 WHEELERS, SPARES & ACCESSORIES*
KARANGALPADY, MANGALORE - 575 003
*Dealers in :*
Minda Switches, M. K. Products, Swiss Auto Products, Power Coils

Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
*Authorised Dealers for :*
Vijai Super GP 150 &
Vikram 3 Wheelers (Petrol & Diesel)




## ❋❋❋ ಅಪಾರಕೀರ್ತಿ ಗಳಿಸಿ ❋❋❋



**ಕು| ಮೇಘ ರಾವ್** ಈ ಬಾರಿಯ ಜೆ. ಇ. ಇ. ಅಡ್ವಾನ್ಸ್ ಪರೀಕ್ಷೆಯಲ್ಲಿ ದೇಶಕ್ಕೆ 896 ರ್‍ಯಾಂಕ್ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಹಿರಿಯಡಕ ಅಳುಗ್ಗೇಲು ಶ್ರೀ ರಮೇಶ್ ರಾವ್ ಮತ್ತು ಶ್ರೀಮತಿ ದೀಪಾ ರಾವ್ ಇವರ ಸುಪುತ್ರಿ.

## ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಂಘ, ಬಂಟ್ವಾಳ ವಲಯ
## ಶ್ರೀ ಶಂಕರ ಭಗವತ್ಪಾದರ ಜಯಂತಿ ಆಚರಣೆ



ಶ್ರೀ ಶಂಕರಭಗವತ್ಪಾದರ ಜಯಂತಿ ಆಚರಣೆಯನ್ನು ತಾ. 26–05–2024ನೇ ಭಾನುವಾರ ಬೈರಿಕಟ್ಟೆಯಲ್ಲಿನ ಶಿವರಾಮರಾಯರ ಮನೆಯಲ್ಲಿ ಭಗವತ್ಪಾದರ ಭಕ್ತರ ಒಗ್ಗೂಡುವಿಕೆಯೊಂದಿಗೆ ನೆರವೇರಿಸಲಾಯಿತು. ದೀಪ ಪ್ರಜ್ವಲನೆಯ ಬಳಿಕ ಶ್ರೀಶಂಕರ ಭಗವತ್ಪಾದರ ಅಷ್ಟೋತ್ತರ ಶತನಾಮಾವಳಿಯನ್ನು ಸಾಮೂಹಿಕವಾಗಿ ಪಠಣ ಮಾಡಲಾಯಿತು.

ಶ್ರೀಮತಿ ಅರುಣಾ ಶಿವರಾಮ ರಾವ್ ನೆಟ್ಲ ಇವರ ನೇತೃತ್ವದಲ್ಲಿ ಶ್ರೀ ಶಂಕರರ ಗುರುಸ್ತುತಿಯೊಂದಿಗೆ ಭಜನಾ ಸತ್ಸಂಗ ನೆರವೇರಿಸಲಾಯಿತು. ಶ್ರೀ ಶಂಕರರಿಗೆ ಮಂಗಳಾರತಿ ಬಳಿಕ ಸಭೆಯು ಸಭಾ ಅಧ್ಯಕ್ಷರಾದ ಶ್ರೀ ಕೃಷ್ಣಶರ್ಮ ಅನಾರು ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

ವೇದಿಕೆಯಲ್ಲಿ ಸಭಾದ ಅಧ್ಯಕ್ಷರಾದ ಶ್ರೀ ಕೃಷ್ಣಶರ್ಮ ಅನಾರು, ಸಂಚಾಲಕರಾದ ಶ್ರೀ ಕೆ. ಮೋಹನ ರಾಯರು, ಕಟ್ಟಡ ಸಮಿತಿ ಅಧ್ಯಕ್ಷರಾದ ಶ್ರೀ ಪಿ. ಎನ್. ನಾಗೇಶ ರಾಯರು, ಪ್ರವಚನಕಾರರಾಗಿ ಶ್ರೀ ಬೆಟ್ಟಂಪಾಡಿ ಅಶೋಕ ಕುಮಾರ್, ಅತಿಥಿಗಳಾಗಿ ಕಡಬ ಸಂಘದ ಅಧ್ಯಕ್ಷರಾದ ಶ್ರೀ ಪದ್ಮನಾಭಯ್ಯ ಉಬರಳೆ ಉಪಸ್ಥಿತರಿದ್ದರು.

ಶ್ರೀ ಭವಾನಿಶಂಕರ ರಾಯರು ಕೇದಗೆ ಸ್ವಾಗತ ಕಾರ್ಯಕ್ರಮ ನಿರ್ವಹಿಸಿದರು. ಶ್ರೀ ಬೆಟ್ಟಂಪಾಡಿ ಅಶೋಕ್ ಕುಮಾರ್‌ರವರು ಶ್ರೀ ಶಂಕರ ಭಗವತ್ಪಾದರ ಬಗ್ಗೆ ಉಪನ್ಯಾಸ ನೆರವೇರಿಸಿದರು. ಶ್ರೀ ಬಾಲಕೃಷ್ಣ ರಾಯರು, ನಿವೃತ್ತ ಪ್ರಾಂಶುಪಾಲರು ಶ್ರೀ ಶಂಕರ ಭಗವತ್ಪಾದರ ಜಯಂತಿ ಆಚರಣೆ ಹಾಗೂ ಗುರುಮಂದಿರ ನಿರ್ಮಾಣದ ಬಗ್ಗೆ ಸ್ಥೂಲವಾಗಿ ಮನವರಿಕೆ ಮಾಡಿದರು. ಶ್ರೀ ಪದ್ಮನಾಭಯ್ಯ ಉಬರಳೆಯವರು ಶುಭಾಶಂಸನೆಗೈದರು.

ಈ ಬಾರಿ ಎಸ್.ಎಸ್.ಎಲ್.ಸಿ.ಯಲ್ಲಿ ರಾಜ್ಯಕ್ಕೆ 7ನೇ ಸ್ಥಾನವನ್ನು ಪಡೆದ ಶ್ರೀ ಕೃಷ್ಣ ರಾವ್ ಮತ್ತು ಶ್ರೀಮತಿ ಆಶಾ ಕೆ. ರಾವ್, ಕೆಳಗಿನ ನಾವೂರು, ಸುಳ್ಯ ಇವರ ದ್ವಿತೀಯ ಪುತ್ರ ಕೆ. ಆಯುಷ್ ರಾವ್ ಇವರಿಗೆ ಸಭಾದ ವತಿಯಿಂದ ಗೌರವ ಅಭಿನಂದನೆ ಸಲ್ಲಿಸಲಾಯಿತು. ಶ್ರೀ ಶಿವರಾಮ ರಾಯರು ಬೈರಿಕಟ್ಟೆ ಇವರು ಸಭೆಯಲ್ಲಿ ನೆರೆದಂತಹ ಶಂಕರ ಭಗವತ್ಪಾರದ ಭಕ್ತರಿಗೆ ಗೌರವ ಸಲ್ಲಿಸಿದರು. ಶ್ರೀ ಹರೀಶ್ ಕುಮಾರ್ ವಿಟ್ಲ ಇವರು ಧನ್ಯವಾದ ಸಮರ್ಪಿಸಿದರು. ಕಾರ್ಯಕ್ರಮದ ಉಸ್ತುವಾರಿಯನ್ನು ಕಾರ್ಯದರ್ಶಿ ಶ್ರೀ ಶ್ರೀಧರ ರಾವ್ ನೆಟ್ಲ ನಿರ್ವಹಿಸಿದರು. ಸಂಯೋಜನೆಯನ್ನು ಶ್ರೀ ಸಂತೋಷ ರಾವ್ ಕಾವಳಕಟ್ಟೆ ನೆರವೇರಿಸಿದರು.

## ಶ್ರೀ ಶಂಕರ ಪ್ರತಿಷ್ಠಾನ ಕಾರ್ಕಳ
## 'ನಮ್ಮ ನಡೆ ಹಿರಿಯರ ಕಡೆಗೆ' ಕಾರ್ಯಕ್ರಮ



ಶ್ರೀ ಶಂಕರ ಪ್ರತಿಷ್ಠಾನದ ಈ ವರ್ಷದ ಕಾರ್ಯಕ್ರಮಗಳಲ್ಲಿ ವಿಶಿಷ್ಟ ಕಾರ್ಯಕ್ರಮ 'ನಮ್ಮ ನಡೆ ಹಿರಿಯರ ಕಡೆಗೆ' ಎಂಬ ಶೀರ್ಷಿಕೆಯಡಿ ದಿನಾಂಕ 19–5–2024ರಂದು ಶ್ರೀ ವಿ. ಮನೋಹರ್ ರಾವ್ ದಂಪತಿಗಳ ಸನ್ಮಾನದಿಂದ ಶುಭಾರಂಭಗೊಂಡು, ಅಧ್ಯಕ್ಷರಾದ ಶ್ರೀ ಕೇಶವ ರಾವ್ ಅವರ ತಾಯಿಯವರಾದ ಶ್ರೀಮತಿ ಲಲಿತಮ್ಮ ಶಂಕರ ರಾವ್ ಅವರಿಗೆ ಸನ್ಮಾನ ಮಾಡುವ ಮೂಲಕ ಕಾರ್ಯಕ್ರಮ ಆರಂಭಿಸಲಾಯಿತು.

**ಮನೆ ಮನೆಗೆ ತೆರಳಿ ನಮ್ಮಿಂದ ಸನ್ಮಾನಗೊಂಡವರು :**

**ಶ್ರೀಮತಿ ಶಾರದಮ್ಮ, ಕುಕ್ಕುಂದೂರು (ಶ್ರೀ ಉದಯ ರಾವ್ ಇವರ ತಾಯಿ)**

**ಶ್ರೀಮತಿ ರಾಜರಾಜೇಶ್ವರಿ ಟೀಚರ್**

**ಶ್ರೀ ರತ್ನಾಕರ್ ರಾವ್ ಗುಡ್ಡೆ ಅಂಗಡಿ**

**ಶ್ರೀಮತಿ ಮಾಲಿನಿ ಬಾಯಿ** (ನಾರಾಯಣ್ ರಾವ್ ಜೋಗುಳಬೆಟ್ಟು ಇವರ ಅತ್ತೆ) ಇವರನ್ನು ಗೌರವಿಸಿ ಅಭಿನಂದಿಸಲಾಯಿತು. ಹರಿವಾಣ, ಶಾಲು, ಹಣ್ಣುಗಳು, ಹಾರ, ಶ್ರೀ ಶಂಕರರ ಸ್ಮರಣಿಕೆ ನೀಡಿ ಆಶೀರ್ವಾದ ಪಡೆಯಲಾಯಿತು. ತಂಡದಲ್ಲಿ ಶ್ರೀ ಕೇಶವ ರಾವ್ – ಅಧ್ಯಕ್ಷರು, ಶ್ರೀ ಸತೀಶ್ ರಾವ್ ಕರ್ವಾಲು – ಕಾರ್ಯದರ್ಶಿ, ಶ್ರೀಮತಿ ಸಾವಿತ್ರಿ ಮನೋಹರ್ ರಾವ್ – ಉಪಾಧ್ಯಕ್ಷರು, ಶ್ರೀ ಭವಾನಿಶಂಕರ್ ರಾವ್ – ಸಂಚಾಲಕರು, ಶ್ರೀ ಪದ್ಮನಾಭ ಭಂಡಿ, ಕಟ್ಟಡ ಸಮಿತಿ ಅಧ್ಯಕ್ಷರು, ಶ್ರೀ ಸುಬ್ರಹ್ಮಣ್ಯ ಶರ್ಮ – ಜೊತೆ ಕಾರ್ಯದರ್ಶಿ ಉಪಸ್ಥಿತರಿದ್ದರು.

## ಸನ್ಮಾನ



ಚಿತ್ರಾಪುರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶ್ರೀ ಶ್ರೀನಿವಾಸ ರಾವ್ ಮತ್ತು ಶ್ರೀಮತಿ ಪುಷ್ಪಾವತಿ ದಂಪತಿಗಳನ್ನು ಗಣ್ಯರ ಉಪಸ್ಥಿತಿಯಲ್ಲಿ ಸನ್ಮಾನಿಸಲಾಯಿತು. ಹಲವಾರು ವರ್ಷಗಳಿಂದ ಶಾಲಾ ಪ್ರಾರಂಭೋತ್ಸವದಂದು ತನು, ಮನ, ಧನಗಳಿಂದ ಅವರು ಸಹಕರಿಸುತ್ತಿದ್ದಾರೆ.

ಪತ್ರಿಕೆಗೆ ಶುಭ ಬಯಸುವ–

**ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು**
**ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ**
**ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ**

NAVADURGA FINANCIALS
Estd 1998
SCAN ME TO KNOW MORE!!!


# ಇಂಚರ ಸರ್ಜಿಕಲ್ ಕ್ಲಿನಿಕ್‌ನಲ್ಲಿ ಪ್ರಬಂಧ ಸ್ಪರ್ಧೆ ಹಾಗೂ ವಿದ್ಯಾರ್ಥಿವೇತನ ವಿತರಣೆ

ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ ಹಾಗೂ ಇಂಚರ ಸರ್ಜಿಕಲ್ ಕ್ಲಿನಿಕ್ ಉಡುಪಿ ಇವರ ಜಂಟಿ ಆಶ್ರಯದಲ್ಲಿ ತಾ. 19–05–2024ನೇ ರವಿವಾರ ಪ್ರಬಂಧ ಸ್ಪರ್ಧೆ ಹಾಗೂ ವಿದ್ಯಾರ್ಥಿವೇತನ ವಿತರಣಾ ಕಾರ್ಯಕ್ರಮವು ಜರಗಿತು. ಹತ್ತನೆಯ, ಹನ್ನೊಂದನೆಯ ಹಾಗೂ ಹನ್ನೆರಡನೆಯ ತರಗತಿಯ ವಿದ್ಯಾರ್ಥಿಗಳಿಗೆ ಕನ್ನಡ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ಶ್ರೀ ಆದಿಶಂಕರಾಚಾರ್ಯರ ಸಂಕ್ಷಿಪ್ತ ಜೀವನಚರಿತ್ರೆ ಎಂಬ ವಿಷಯದ ಮೇಲೆ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಬೆಳಗ್ಗೆ ಗಂಟೆ 9–00ಕ್ಕೆ ಶ್ರೀ ಶಂಕರಾಚಾರ್ಯರ ಚಿತ್ರಕ್ಕೆ ದೀಪಪ್ರಜ್ವಲನ ಹಾಗೂ ಪುಷ್ಪಾರ್ಚನೆಯನ್ನು ಸಲ್ಲಿಸುವುದರ ಮೂಲಕ ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ಮಂಗಳೂರು (ರಿ.) ಇದರ ಅಧ್ಯಕ್ಷರಾದ ಶ್ರೀ ಕೆ. ಮಂಜುನಾಥ್ ಹೆಬ್ಬಾರ್ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಉಡುಪಿಯ ಶ್ರೀ ಶಾರದಾ ಮಂಟಪದ ಕಾರ್ಯದರ್ಶಿಗಳಾದ ಶ್ರೀ ಪ್ರಭಾಕರ ಭಂಡಿ ಉಪಸ್ಥಿತರಿದ್ದರು. ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿನಿ ಹರ್ಷಿತಾ ರಚಿಸಿದ್ದ ಶ್ರೀ ಶಂಕರಾಚಾರ್ಯರ ಸುಂದರ ಚಿತ್ರವನ್ನು ಸಹ ಪೂಜಾ ಪೀಠದಲ್ಲಿ ಇರಿಸಲಾಯಿತು. ನಂತರ ಬೆಳಗ್ಗೆ ಗಂಟೆ 9–30ರಿಂದ 11–00ರ ತನಕ ಪ್ರಬಂಧ ಸ್ಪರ್ಧೆಯ ಬರವಣಿಗೆಯು ನಡೆಯಿತು. ಬೆಳಗ್ಗೆ ಗಂಟೆ 11–00ರಿಂದ 12–00ರ ತನಕ ಶ್ರೀ ಶಾರದಾ ಭಜನಾ ಮಂಡಳಿ, ಕುಂಜಿಬೆಟ್ಟು, ಉಡುಪಿ ಇವರು ಶ್ರೀಶಂಕರಾಚಾರ್ಯ ವಿರಚಿತ ಐದು ಸ್ತೋತ್ರಗಳನ್ನು ಸುಶ್ರಾವ್ಯವಾಗಿ ಹಾಡಿದರು. ವಿದ್ಯಾರ್ಥಿಗಳು ಹಾಗೂ ಪೋಷಕರು ಜೊತೆಗೂಡಿದ್ದರು. ನಂತರ ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರು ತಮ್ಮ ಅನಿಸಿಕೆಯನ್ನು ನೀಡಿ ಈ ಪ್ರಬಂಧಸ್ಪರ್ಧೆಯಲ್ಲಿ ಪಾಲ್ಗೊಂಡದ್ದರಿಂದ ಮನೆಯವರೆಲ್ಲರಿಗೂ ಶ್ರೀ ಶ್ರೀ ಶಂಕರಾಚಾರ್ಯರ ಮಹಾನ್ ವ್ಯಕ್ತಿತ್ವದ ಪರಿಚಯವಾಯಿತು ಎಂದರು. ನಂತರ ನಡೆದ ಸಭಾಕಾರ್ಯಕ್ರಮದಲ್ಲಿ ಉಡುಪಿ ಜಿಲ್ಲೆಯ ಶಂಕರ ತತ್ವಪ್ರಚಾರ ಸಮಿತಿಯ ಸಂಚಾಲಕರಾದ ಶ್ರೀ ಟಿ. ವಿಶ್ವನಾಥ ಶಾನ್‌ಭಾಗ್ ಹಾಗೂ ಉಡುಪಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ರವಿರಾಜ್ ಹೆಚ್. ಪಿ. ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶ್ರೀ ಟಿ. ವಿಶ್ವನಾಥ ಶಾನ್‌ಭಾಗ್ ಇವರು ಮಾತನಾಡುತ್ತಾ ಶ್ರೀ ಶಂಕರರು ಎರಡು ಜೀವಗಳಲ್ಲಿ ಭೇದವಿಲ್ಲವೆಂಬ ಅದ್ವೈತ ತತ್ವವನ್ನು ಪ್ರಚಾರ ಮಾಡಿದವರು, ಆದುದರಿಂದ ಅವರ ಜಯಂತಿಯ ಆಚರಣೆಯನ್ನು ಜಾತಿಮತ ಭೇದವಿಲ್ಲದೆ ಎಲ್ಲರೂ ತಮ್ಮ ಮನೆಯಲ್ಲಿ ಆಚರಿಸಬೇಕು ಎಂದು ಕರೆನೀಡಿದರು.




ಶ್ರೀ ರವಿರಾಜ್ ಹೆಚ್.ಪಿ. ಅವರು ಮಾತನಾಡುತ್ತಾ ಈ ಕಾರ್ಯಕ್ರಮವು ಮುಂದಿನ ವರ್ಷಗಳಲ್ಲಿ ಇನ್ನೂ ಹಲವು ಸಂಘಟನೆಗಳೊಂದಿಗೆ ಸೇರಿಕೊಂಡು ಇನ್ನೂ ದೊಡ್ಡ ಮಟ್ಟದಲ್ಲಿ ಆಚರಿಸುವಂತಾಗಲಿ ಎಂದು ಕರೆ ನೀಡಿದರು ಹಾಗೂ ಸಾಹಿತ್ಯ ಪರಿಷತ್ತಿನ ಮನೆಗೊಂದು ಗ್ರಂಥಾಲಯ ಅಭಿಯಾನದಲ್ಲಿ ಪಾಲ್ಗೊಳ್ಳುವಂತೆ ವಿನಂತಿಸಿದರು. ಇಂಚರ ಸರ್ಜಿಕಲ್ ಕ್ಲಿನಿಕ್‌ನ ನಿರ್ದೇಶಕರಾದ ಡಾ. ವೈ. ಸುದರ್ಶನ ರಾವ್ ಇವರು ಸ್ವಾಗತಿಸಿದರು. ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್‌ನ ಟ್ರಸ್ಟಿಗಳಾದ ಶ್ರೀ ವೈ. ಭುವನೇಂದ್ರ ರಾವ್ ಹಾಗೂ ಶ್ರೀ ವೈ. ಶಾಂತಿನಾಥ ರಾವ್ ಇವರು ಕೀರ್ತಿಶೇಷ ಸಾತ್ವಿಕ್ ಶಾಸ್ತ್ರಿ ಸ್ಮಾರಕ ವಿದ್ಯಾರ್ಥಿವೇತನವನ್ನು ವಿತರಿಸಿದರು. ನಂತರ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದ ದಂಡತೀರ್ಥ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿಯಾದ ಕುಮಾರಿ ದಿವ್ಯಲಕ್ಷ್ಮಿ ಇವಳಿಗೆ ಬಹುಮಾನವನ್ನು ಶ್ರೀ ಟಿ. ವಿಶ್ವನಾಥ ಶಾನ್‌ಭಾಗ್ ಪ್ರದಾನಿಸಿದರು. ದ್ವಿತೀಯ ಸ್ಥಾನ ಪಡೆದ ಪೂರ್ಣಪ್ರಜ್ಞ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ ರಮ್ಯ ಕೆ. ಇವರಿಗೆ ಶ್ರೀ ರವಿರಾಜ್ ಟಿ. ಪಿ. ಇವರು ಪ್ರಶಸ್ತಿಯನ್ನು ಪ್ರದಾನಿಸಿದರು. ಡಾ. ವೈ. ರವೀಂದ್ರನಾಥ ರಾವ್ ಹಾಗೂ ಶ್ರೀ ವೈ. ಭುವನೇಂದ್ರ ರಾವ್ ಹಾಗೂ ಶ್ರೀಮತಿ ಮೀರಾ ರಾಜೇಶ್ ಇವರು ತೀರ್ಪುಗಾರರಾಗಿ ಸಹಕರಿಸಿದ್ದರು. ಇವರನ್ನು ಡಾ| ವೈ. ಸುದರ್ಶನ್ ರಾವ್ ಹಾಗೂ ಡಾ| ವಿದ್ಯಾ ಎಸ್. ರಾವ್ ಇವರು ಗೌರವಿಸಿದರು. ಕಾರ್ಯಕ್ರಮದ ಸಂಚಾಲಕಿಯಾದ ಡಾ| ವಿದ್ಯಾ ಎಸ್. ರಾವ್ ಇವರ ಧನ್ಯವಾದ ಸಮರ್ಪಣೆ ಹಾಗೂ ಭೋಜನದೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು. ಶ್ರೀಮತಿ ಸುನಿತಾ ಪ್ರಸಾದ್ ರಾವ್ ಇವರು ಕಾರ್ಯಕ್ರಮವನ್ನು ನಿರೂಪಿಸಿದ್ದರು.

## ಅಳಿದ ನಮ್ಮನೆ... ಇಳಿರುವುದು ಸುಮ್ಮನೆ...




ಕಳಸ ಯದ್ರಗೋಡು ನಿವಾಸಿ **ವೈ. ಎಸ್. ನಾಗೇಂದ್ರ ರಾವ್** (74) ತಾ. 11–6–2024ರ ಮಂಗಳವಾರ ಸ್ವಗೃಹದಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಓರ್ವ ಮಗ, ಐದು ಪುತ್ರಿಯರನ್ನು ಅಗಲಿದ್ದಾರೆ.

***



**ಕಿರಣ್ ನೆಲ್ಲಿಕುಂಜೆ** (49 ವರ್ಷ) ಮಂಗಳೂರು ನಿವಾಸಿ ತಾ. 9–6–2024ನೇ ಭಾನುವಾರ ನಿಧನ ಹೊಂದಿದರು. ಇವರು ನೆಲ್ಲಿಕುಂಜೆ ದಿ| ಸುಬ್ಬರಾವ್ – ಸರಳಾ ದೇವಿಯವರ 8 ಗಂಡು ಮಕ್ಕಳಲ್ಲಿ ಕಿರಿಯವರಾಗಿದ್ದು, ತಮ್ಮ ಪತ್ನಿ, ಮಗ, ಮಗಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

***



**ಮಸ್ಕಿಬೈಲ್ ಗೋವಿಂದ ರಾವ್** (89) ತಾ. 4–6–2024ನೇ ಮಂಗಳವಾರ ನಿಧನ ಹೊಂದಿದರು. ಇವರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿಯನ್ನು ಅಗಲಿದ್ದಾರೆ.

***



**ಶ್ರೀಮತಿ ಹೇಮಾವತಿ ಮೋಹನಚಂದ್ರ ರಾವ್** (71) ತಾ. 7–6–2024ನೇ ಶುಕ್ರವಾರ ಮಂಗಳೂರಿನಲ್ಲಿ ನಿಧನ ಹೊಂದಿದರು. ಅವರು ಪತಿ, ಪುತ್ರ ಮತ್ತು ಪುತ್ರಿಯನ್ನು ಅಗಲಿದ್ದಾರೆ.

***




ಜೋಗಿಮೂಲೆ ಅಡೂರು ಶ್ರೀ ಚಂದ್ರಶೇಖರ ಮೇರ್ಟ ಇವರ ಧರ್ಮಪತ್ನಿ **ಶ್ರೀಮತಿ ಇಂದಿರಾ ಸಿ. ಎಚ್.** (79) ತಾರೀಕು 16–6–2024ನೇ ರವಿವಾರ ನಿಧನ ಹೊಂದಿದರು.

***



**ಕುಂಜಾಲುಗಿರಿ ಹರಿನಾರಾಯಣ** (66) ತಾ. 17–6–2024ನೇ ಸೋಮವಾರ ಅಹ್ಮದ್‌ನಗರದಲ್ಲಿ ನಿಧನ ಹೊಂದಿದರು. ಅವರು ಪತ್ನಿ, ಓರ್ವ ಪುತ್ರ ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

## ವಗ್ಗ ಕಾವಳಕಟ್ಟೆ ಶ್ರೀ ಪ್ರತಾಪ್ ರಾವ್ ಇವರಿಗೆ ವಿದ್ವತ್ ಸನ್ಮಾನ



ತಾ. 12–04–2024ನೇ ಆದಿತ್ಯವಾರ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರಿ ಮತ್ತು ಆಡಳಿತ ಮಂಡಳಿ, ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪಾದೆಬೆಟ್ಟು ಇವರ ಸಹಯೋಗದಲ್ಲಿ ದೇವರ ಬ್ರಹ್ಮಕಲಶೋತ್ಸವ ದಿನಾಚರಣೆ ಮತ್ತು 'ಶ್ರೀ ಶಂಕರ ಭಗವತ್ಪಾದಾಚಾರ್ಯ ಜಯಂತಿ ಮಹೋತ್ಸವ'ವನ್ನು ಕ್ಷೇತ್ರದ ತಂತ್ರಿವರೇಣ್ಯರಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಂತೆ ನಡೆಯಿತು. ಶ್ರೀ ದೇವರಿಗೆ ಪವಮಾನ ಕಲಶಾಭಿಷೇಕ, ಶ್ರೀ ಶಂಕರಾಚಾರ್ಯರಿಗೆ ಕಲ್ಪೋಕ್ತ ಪೂಜೆ ಹಾಗೂ ಸಂಘದ ಸದಸ್ಯರಿಂದ ಅಷ್ಟೋತ್ತರ ಪಾರಾಯಣ, ಭಜನಾ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ವಗ್ಗ ಕಾವಳಕಟ್ಟೆ ಶ್ರೀ ಪ್ರತಾಪ್ ರಾವ್ ಇವರು ಶಂಕರಾಚಾರ್ಯರ ಬಗ್ಗೆ ಉಪನ್ಯಾಸ ಮಾಡಿದರು ಇವರಿಗೆ ವಿದ್ವತ್ ಸನ್ಮಾನ ಮಾಡಿ ಗೌರವಿಸಲಾಯಿತು. ನಂತರ ಅನ್ನಸಂತರ್ಪಣೆಯು ನಡೆಯಿತು.

Sri Hari Adyapady
Proprietor
Ph : 0824-2251597 (R)
2252119 (O)
Mobile : 9448344612
9964072489
SHIVA ELECTRICALS
2nd Floor, Ozanam Complex, Church Building
Main Road, BAJPE, MANGALORE
We undertake all types of Electrical,
Plumbing and Sanitary works

# ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಸುರತ್ಕಲ್ – ವೈದಿಕ ಶಿಬಿರ
# ಡಾ। ದಯಾನಂದ ಎಸ್. ರಾವ್ ಎಜುಕೇಶನಲ್ ಟ್ರಸ್ಟ್, ಬೆಂಗಳೂರು ಇವರಿಂದ
# ಕಲಿಕಾ ಸಾಮಗ್ರಿಗಳ ವಿತರಣಾ ಸಮಾರಂಭ ಹಾಗೂ ಶಂಕರ ಜಯಂತಿ ಆಚರಣೆ

ದಿನಾಂಕ 12–05–2024ನೇ ರವಿವಾರದಂದು ನಮ್ಮ ಸಂಘದ ವತಿಯಿಂದ ಹಾಗೂ ಶ್ರೀ ಸ್ಥಾನಿಕ ಮಹಾಮಂಡಲದ ಸಹಕಾರದೊಂದಿಗೆ ಸಂಜೆ ಗಂಟೆ 4–30ಕ್ಕೆ ಸರಿಯಾಗಿ, ಮಲ್ಲಮಾರು ಶ್ರೀ ಭವಾನಿಶಂಕರ ರಾಯರ ಮನೆಯಲ್ಲಿನ ಶ್ರೀ ದುರ್ಗಾ ಸಭಾಂಗಣದಲ್ಲಿ ವೈದಿಕ ಶಿಬಿರವು ಉದ್ಘಾಟನೆಗೊಂಡಿತು. ಶಿಬಿರದಲ್ಲಿ ಭಾಗವಹಿಸಿದ ವಟುಗಳು ಹಾಗೂ ಸಮಾಜ ಬಾಂಧವರಿಗೆ ಪುರೋಹಿತರಾದ ಶ್ರೀ ಅಶ್ವಥ್ ಭಟ್ ಹಳೆಯಂಗಡಿ ಇವರು ಜಪ, ತಪ ಹಾಗೂ ಶಂಕರಾಚಾರ್ಯರ ಪ್ರಾರ್ಥನೆಯನ್ನು ತರಬೇತಿ ನೀಡಿದರು.

ಮುಂದೆ ಅದೇ ವೇದಿಕೆಯಲ್ಲಿ ಡಾ। ದಯಾನಂದ ಎಸ್. ರಾವ್ ಎಜುಕೇಶನಲ್ ಟ್ರಸ್ಟ್, ಬೆಂಗಳೂರು ಇವರಿಂದ ಕೊಡಲ್ಪಟ್ಟ ಕಲಿಕಾ ಸಾಮಗ್ರಿಗಳ ವಿತರಣೆಯು ನಡೆಯಿತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕಾಂತಾವರ ಶ್ರೀ ಪ್ರಭಾಕರ್ ರಾವ್ ಮತ್ತು ಖ್ಯಾತ ಎಲುಬು ತಜ್ಞರಾದ ಡಾ। ಪ್ರಶಾಂತ್ ಮೋಹನ್ ಭಾಗವಹಿಸಿದರು.

ಸಮಾರಂಭದಲ್ಲಿ ಆರ್ಥಿಕವಾಗಿ ಹಿಂದುಳಿದ ನಮ್ಮ ಸಂಘದ ಇಂಜಿನಿಯರಿಂಗ್ ವಿದ್ಯಾರ್ಥಿಗೆ ಲ್ಯಾಪ್‌ಟಾಪ್, ಪೆನ್‌ಡ್ರೈವ್, ಪುಸ್ತಕಗಳು ಹಾಗೂ ಶಾಲಾ ಬ್ಯಾಗನ್ನು ವಿತರಿಸಲಾಯಿತು. ನಂತರ 9ನೇ ತರಗತಿಯಿಂದ ಪದವಿ, ಸ್ನಾತಕೋತ್ತರ ಪದವಿಯ ಒಟ್ಟು ಇಪ್ಪತ್ತು ವಿದ್ಯಾರ್ಥಿಗಳಿಗೆ ಕಲಿಕಾ ಸಾಮಗ್ರಿಗಳನ್ನು ವಿತರಿಸಲಾಯಿತು.

ಕಲಿಕಾ ಸಾಮಗ್ರಿಗಳನ್ನು ವಿತರಿಸಿ ಮಾತನಾಡಿದ ಶ್ರೀ ಕೆ. ಪ್ರಭಾಕರ್ ರಾವ್ ಹಾಗೂ ಡಾಕ್ಟರ್ ಪ್ರಶಾಂತ್ ಮೋಹನ್ ಇವರು ದಾನಿಗಳಿಂದ ದೊರಕಿದ ಸಹಾಯವನ್ನು ಕಲಿಕೆಗೆ ಉಪಯೋಗಿಸಿಕೊಂಡು, ಮುಂದಿನ ದಿನಗಳಲ್ಲಿ ಉದ್ಯೋಗ ದೊರಕಿದ ಬಳಿಕ ಸಮಾಜದ ಇತರ ಮಕ್ಕಳಿಗೆ ಹಾಗೂ ಸಂಘಕ್ಕೆ ನೆರವಾಗಬೇಕೆಂದರು.

ಗೌರವಾಧ್ಯಕ್ಷರಾದ ಶ್ರೀ ಭವಾನಿಶಂಕರ್ ರಾವ್, ಉಪಾಧ್ಯಕ್ಷರಾದ ಶ್ರೀ ವಾಸುದೇವ ಶಾನುಭೋಗ್, ಶ್ರೀಮತಿ ಪರಿಮಳ ಪ್ರಶಾಂತ್, ಕೋಶಾಧಿಕಾರಿ ಶ್ರೀ ರಾಧಾಕೃಷ್ಣ ರಾವ್, ಯುವ ವೇದಿಕೆಯ ಅಧ್ಯಕ್ಷರಾದ ಶ್ರೀ ಸಂದೀಪ್ ಶಾನುಭೋಗ್ ಹಾಗೂ ಮಹಿಳಾ ವೇದಿಕೆ ಅಧ್ಯಕ್ಷರಾದ ಶ್ರೀಮತಿ ಸುನಿತಾ ಶ್ರೀಕಾಂತ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸಂಘದ ಅಧ್ಯಕ್ಷರಾದ ಶ್ರೀ ಸಿ. ರಾಘವೇಂದ್ರ ರಾವ್ ಇವರು



ಶ್ರೀ ಶಂಕರಾಚಾರ್ಯರ ಸಂಕ್ಷಿಪ್ತ ಪರಿಚಯ, ನಮ್ಮ ಸಮಾಜದ ಯುವಕ ಯುವತಿಯರು ಪ್ರತಿ ಕ್ಷೇತ್ರದಲ್ಲೂ ಮಾಡಬೇಕಾದ ಸಾಧನೆ ಹಾಗೂ ದಾನಿಗಳಿಂದ ಮತ್ತು ಸಂಘದಿಂದ ಪಡೆದ ಸಹಕಾರವನ್ನು ಸ್ಮರಿಸಿ, ಮುಂದೆ ಸಮಾಜ ಹಾಗೂ ಸಂಘಕ್ಕೆ ನೆರವಾಗಬೇಕೆಂದರು.

ಸಂಘದ ಪದಾಧಿಕಾರಿಗಳು ಹಾಗೂ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಚಂದಗಾಣಿಸಿದರು.

ಕಾರ್ಯದರ್ಶಿ ಶ್ರೀ ಎಂ. ಫಾಲಚಂದ್ರ ಶರ್ಮ ಅವರು ಕಾರ್ಯಕ್ರಮ ನಿರೂಪಿಸುವುದರೊಂದಿಗೆ, ಗಣ್ಯರಿಗೆ ಹಾಗೂ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು. ನಂತರ ನಡೆದ ಶ್ರೀ ಶಂಕರ ಜಯಂತಿ ಕಾರ್ಯಕ್ರಮದಲ್ಲಿ ನಮ್ಮ ಸಂಘದ ಶ್ರೀ ಶಂಕರ ಭಜನಾ ಮಂಡಳಿಯಿಂದ ಶ್ರೀ ಹರಿನಾರಾಯಣ ರಾವ್ ಇವರ ಮಾರ್ಗದರ್ಶನದಲ್ಲಿ ಭಜನಾ ಕಾರ್ಯಕ್ರಮ, ಸಂಘದ ಸದಸ್ಯರಿಂದ ಅಷ್ಟೋತ್ತರ ಪಾರಾಯಣ, ಶಿವಪಂಚಾಕ್ಷರಿ ಮೂಲ ಸ್ತೋತ್ರ ಪಠಣ ನಡೆಯಿತು. ಪೂಜೆ ನೆರವೇರಿಸಿ, ಪುರೋಹಿತರಾದ, ಹೆಜಮಾಡಿ ಶ್ರೀ ಕೃಷ್ಣರಾಜ ಭಟ್ ಇವರು ಶಂಕರಾಚಾರ್ಯರ ಜೀವನ ಸಾಧನೆ ಬಗ್ಗೆ ತಿಳಿಸಿ, ನಾವೆಲ್ಲರೂ ಧರ್ಮಾಚರಣೆಯಲ್ಲಿ ತೊಡಗಿಸಿ ಕೊಳ್ಳಬೇಕೆಂದು ತಿಳಿಸಿದರು. ಶ್ರೀ ಪ್ರವೀಣ್ ಕುಮಾರ್ ಬಳಗದವರಿಂದ ತಯಾರಿಸಲಾಗಿದ್ದ ಉಪಾಹಾರದೊಂದಿಗೆ ಕಾರ್ಯಕ್ರಮವು ಸಂಪನ್ನಗೊಂಡಿತು.

ಪತ್ರಿಕೆಗೆ ಶುಭ ಬಯಸುವ–
ಶ್ರೀ ಸೋಮಶೇಖರನ್
ಮತ್ತು
ಶ್ರೀಮತಿ ಅರುಣಾ ಸೋಮಶೇಖರನ್
ಚಿಲಿಂಬಿ, ಮಂಗಳೂರು

PRAVEEN KUMAR ADYAPADY
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles, A.C., D.C. Cases, Land Conversion, Registration etc.

Manish Rao U.
Tel : (O) 2223301
Mobile : 9448726499 / 8884284939
NAVA COMPUTERS
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001

ಪತ್ರಿಕೆಗೆ ಶುಭ ಬಯಸುವ–
ಶ್ರೀ ಕಾಂತಾವರ ಜಯಪ್ರಕಾಶ್
ಮತ್ತು ಶ್ರೀಲತಾ ಹಾಗೂ
ತನ್ವಿ, ನಿವೇದ, ಧೃತಿ ಮತ್ತು ಧ್ರುವ್

M.Devanand bhat
Mob: 9845644556
9663993883
Shobha Digital STUDIO
Belavai Moodabidri Yedapadavu
08258-276177 9901995655 0824-2256374
mdevanandbhat@gmail.com

ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
ರವಿಕಿರಣ್ ಕ್ಯೊಲ, ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

PRAMOD AUTOMOBILES
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

Muralidhara Rao Adyapadi
Proprietor
Mob : 94480 27259
99803 16434
SPANDANA
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

# ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ಸಹಾಯಹಸ್ತ



ಮಂಗಳೂರು ನಿವಾಸಿ ಶಾಂಕರತತ್ವ ಅಭಿಯಾನದ ದ. ಕ. ಸಂಚಾಲಕರಾದ ಶ್ರೀ ಶ್ರೀಧರ್ ಶಾಸ್ತ್ರಿ ಮತ್ತು ಶ್ರೀಮತಿ ಶಾರದಾ ಶಾಸ್ತ್ರಿ ದಂಪತಿಗಳು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿನಿಲಯಕ್ಕೆ ರೂ. **1,00,000/-** (ರೂಪ್ಯಾ ಒಂದು ಲಕ್ಷ) ದೇಣಿಗೆ ನೀಡಿದ್ದಾರೆ. ಈ ಹಿಂದೆಯೂ ಅವರು ರೂ. **3,10,000/-** ನೀಡಿದ್ದು, ಒಟ್ಟು ರೂ. **4,10,000/-** ನೀಡಿದಂತಾಗಿದೆ. ಇನ್ನು ಮುಂದೆಯೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು.





8882 777 444
98807 42159 | 98450 84866 |
sales@landtrades.in | www.landtrades.in

ALTURA
BENDOORWELL

CRISIL Real Estate DA2 Developer Gradings
CREDAI MANGALORE
ISO 9001:2015

Office : Milestone25", 5th Floor, Collectors Gate Junction, Balmatta, Mangalore, Karnataka 575001 | +91 824 2425424, 2423866, 2445840
EMAIL ID : **Sales@landtrades.in** | **info@lantrades.in**


Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri


*Publisher : Sri Harsha Kumar Kedige, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3*
*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*